ಶ್ರೀ ಅನಂತ್‌ನಾಗ್ (ಬೆಂಗಳೂರು ನಗರ ಅಭಿವೃದ್ಧಿ ರಾಜ್ಯ ಸಚಿವರು)

ಅ)	ಬೆಂಗಳೂರು ಮಹಾನಗರಪಾಲಿಕೆ ವ್ಯಾಪ್ತಿ	252
	ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ	13
	ನಗರಸಭೆಗಳು	1000
	ಕೊಳಚೆ ನಿರ್ಮೂಲನಾ ಮಂಡಳಿ	430
	ಒಟ್ಟು	**1698**

ಆ) ಯಾವುದೂ ಇಲ್ಲ.

ಇ) ಯಾರು ಅನಧಿಕೃತ ನಿರ್ಮಾಣ ಮಾಡಿರುತ್ತಾರೆಯೋ ಅವರೇ ಜವಾಬ್ದಾರರಾಗಿರುತ್ತಾರೆ.

ಈ) ಭಾರತೀನಗರ ವಿಧಾನಸಭಾ ಕ್ಷೇತ್ರದಲ್ಲಿ ಯಾವುದೇ ಅನಧಿಕೃತ ನಿರ್ಮಾಣಗಳನ್ನು ಕೆಡವಿ ಹಾಕಿಲ್ಲವಾದ್ದರಿಂದ ಈ ಪ್ರಶ್ನೆಯು ಉದ್ಭವಿಸುವುದಿಲ್ಲ.

ಉ) ಉದ್ಭವಿಸುವುದಿಲ್ಲ.

ವಿಷಯ : ನಿರ್ಮಲ ಬೆಂಗಳೂರು ಆಂಧೋಲನ

1498 (2080)-ಶ್ರೀ ಎನ್. ರಾಜಣ್ಣ (ಭಾರತಾ ನಗರ) : ಮಾನ್ಯ ಬೆಂಗಳೂರು ನಗರ ಅಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬೆಂಗಳೂರು ಮಹಾನಗರ ಪಾಲಿಕೆಯು ನಿರ್ಮಲ ಬೆಂಗಳೂರು ಅಂದೋಲನ ಕಾರ್ಯಕ್ರಮವೇನಾದರೂ ಹಮ್ಮಿ ಕೊಂಡಿದೆಯೇ?

ಆ) ಹಾಗಿದ್ದಲ್ಲಿ, ಪ್ರತಿ ಡಿವಿಜನ್‌ಗಳಲ್ಲಿ ಈ ಬಗ್ಗೆ ಯಾವ ಕ್ರಮಗಳನ್ನು ಕೈಗೊಂಡಿದೆ?

ಇ) ಈ ಕಾರ್ಯಕ್ರಮಕ್ಕೆ ಸ್ವಯಂ ಸೇವಾ ಸಂಸ್ಥೆಗಳು ನಗರಸಭಾ ಸದಸ್ಯರು, ಸ್ಥಳೀಯ ಜನರ ಮತ್ತು ಶಾಸಕರ ಸೇವೆಯನ್ನು ಪಡೆದುಕೊಳ್ಳಲಾಗಿದೆಯೇ?

ಈ) ಈವರೆವಿಗೆ ಈ ಕಾರ್ಯಕ್ರಮಕ್ಕೆ ಖರ್ಚು ಮಾಡಿರುವ ಮೊತ್ತವೆಷ್ಟು?

ಶ್ರೀ ಅನಂತನಾಗ್ (ಬೆಂಗಳೂರು ನಗರ ಅಭಿವೃದ್ಧಿ ರಾಜ್ಯ ಸಚಿವರು)

ಅ) ಹೌದು

ಆ) ಮನೆಮನೆಯಿಂದ, ಅಂಗಡಿ ಅಂಗಡಿಯಿಂದ ಕಸವನ್ನು ಸಂಗ್ರಹಿಸಿ ಸಾಗಿಸುವ ಕಾರ್ಯವನ್ನು ಕೆಲವು ರಸ್ತೆ ಸ್ಥಳಗಳಲ್ಲಿ ಅಳವಡಿಸಲಾಗಿದೆ. ನಗರಪಾಲಿಕೆ ಸದಸ್ಯರು ಸ್ಥಳೀಯ ನಾಯಕರು, ಸ್ವಯಂ ಸೇವಾ ಸಂಘಗಳ ಮತ್ತು ವ್ಯಾಪಾರಿ ಸಂಘಗಳ ಮತ್ತು ವ್ಯಾಪಿ ಸಂಘಗಳಿಂದ ನೆರವೇರಿಸಲಾಗುತ್ತಿದೆ.

ರಸ್ತೆಗಳಲ್ಲಿ ರಸ್ತೆ ಬದಿಯಲ್ಲಿ ಕಸವನ್ನು ಹಾಕುವ ಮತ್ತು ಸ್ವಚ್ಛತೆ ಕಾಪಾಡದಿರುವುದರಿಂದ ಆಡಳಿತಾತ್ಮಕ ವೆಚ್ಚವನ್ನು ವಸೂಲಿಮಾಡಲಾಗುತ್ತಿದೆ.

ಚರಂಡಿ : ಹೂಳೆತ್ತುವ : ಸ್ವಚ್ಛತೆಗೊಳಿಸುವ ಕೆಲಸ ಕೈಗೆತ್ತಿಕೊಳ್ಳಲಾಗಿದೆ. ಸ್ವಚ್ಛತೆ ಕಾಪಾಡಿಕೊಂಡು ಬರುವಲ್ಲಿ ಸಾರ್ವಜನಿಕರ ಸಹಕಾರವನ್ನು ಕರಪತ್ರಗಳ ಮೂಲಕ ಮತ್ತು ದಿನಪತ್ರಿಕೆಗಳ ಮೂಲಕ ಕೋರಲಾಗುತ್ತಿದೆ.

ಇ) ಹೌದು

ಈ) ಯಾವುದೇ ವಿಶೇಷ ಹಣ ಈ ಉದ್ದೇಶಕ್ಕಾಗಿ ಖರ್ಚು ಮಾಡಿರುವುದಿಲ್ಲ.

ವಿಷಯ : ಪಡಿತರ ಚೀಟಿದಾರರಿಗೆ ಆಹಾರ ಸಾಮಗ್ರಿಗಳ ಪ್ರಮಾಣದಲ್ಲಿ ಕಡಿತ

1499 (2077)-ಶ್ರೀ ರಾಮಲಿಂಗಾರೆಡ್ಡಿ (ಜಯನಗರ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ರಾಜ್ಯದಲ್ಲಿ ಪಡಿತರ ಚೀಟಿದಾರರಿಗೆ ನೀಡುತ್ತಿದ್ದ ಆಹಾರ ಸಾಮಗ್ರಿಗಳ ಪ್ರಮಾಣವನ್ನು ಕಡಿತಗೊಳಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಇದಕ್ಕೆ ಕಾರಣಗಳೇನು?

ಇ) ಕೇಂದ್ರದಿಂದ ಹೆಚ್ಚಿನ ಪ್ರಮಾಣದಲ್ಲಿ ಆಹಾರ ಸಾಮಗ್ರಿಗಳನ್ನು ಪಡೆಯಲು ಸರ್ಕಾರವು ಕೈಗೊಂಡ ಕ್ರಮಗಳೇನು?

ಈ) ಬೆಂಗಳೂರು ನಗರದಲ್ಲಿ ಶೇಕಡಾ 30 ರಷ್ಟು ಪಡಿತರ ಚೀಟಿದಾರರು ಅಕ್ಕಿ ಗೋಧಿಯನ್ನು ಪಡೆಯದೇ ಇರುವುದು ಸರ್ಕಾರದವರ ಗಮನಕ್ಕೆ ಬಂದಿದಯೇ?

ಉ) ಹಾಗಿದ್ದಲ್ಲಿ ಅದನ್ನು ಪಡೆಯದಿರುವ ಪಡಿತರ ಚೀಟಿದಾರರ ಬಗ್ಗೆ ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಜಿ. ಬಸವಣ್ಣೆಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು)